ಪದವಿ ಪೂರ್ವ ಕಾಲೇಜು ಮಂಜೂರಾತಿ

296 (2317) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) –ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲಕ್ಕೆ ಪದವಿ ಪೂರ್ವ ಕಾಲೇಜುಗಳನ್ನು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಪ್ರಸ್ತುತ ಸಾಲಿನಲ್ಲಿ ಮಂಜೂರು ಮಾಡಲಾಗುವುದೆ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಕೊಳ್ಳೇಗಾಲ ತಾಲ್ಲೂಕಿನ ಆಲೂರು ಮತ್ತು ಚಿಲಕವಾಡಿ ಯಳಂದೂರು ತಾಲ್ಲೂಕಿನ ಸಂತೇಮರಳ್ಳಿ ಈ ಸ್ಥಳಗಳಿಗೆ ಸರ್ಕಾರ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕೋರಿಕೆ ಬಂದಿದೆ ಈಗಾಗಲೇ ಕೊಳ್ಳೇಗಾಲ ತಾಲ್ಲೂಕಿನಲ್ಲಿ 04 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು 14 ಖಾಸಗಿ, ಪದವಿ ಪೂರ್ವ ಕಾಲೇಜುಗಳು ಇರುತ್ತವೆ

ಯಳಂದೂರು ತಾಲ್ಲೂಕಿನಲ್ಲಿ 01 ಸರ್ಕಾರಿ ಪದವಿ ಪೂರ್ವ ಕಾಲೇಜು, 02 ಖಾಸಗಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ

ಡಾ॥ ನಂಜುಂಡಪ್ಪನವರ ವರದಿ ಶೈಕ್ಷಣಿಕ ಅಗತ್ಯತೆ, ಮೂಲಭೂತ ಸೌಲಭ್ಯದ ಲಭ್ಯತೆ ಹಾಗೂ ವಾರ್ಷಿಕ ಆಯವ್ಯಯದಲ್ಲಿ ಹಣದ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತಿದೆ

ಶ್ರೀ ಎಸ್ ಬಾಲರಾಜ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನನ್ನ ಕ್ಷೇತ್ರಕ್ಕೆ ಪದವಿ ಪೂರ್ವ ಕಾಲೇಜುಗಳ ಅವಶ್ಯಕತೆ ಇದೆ ಎಂದು ಕೇಳಿದ್ದೇನೆ ಅದಕ್ಕೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ ಈ ಸಾಲಿನಲ್ಲಿ ಮಂಜೂರು ಮಾಡುತ್ತೀರಾ ಎಂದು ಕೇಳಿದ್ದೇನೆ ಆದರೆ ಅವರು ಕೊಟ್ಟಿರುಮಂತಹ ಉತ್ತರವೇನು ಇದೆ ಎಂದರೆ, ಬಹುಶಃ ಶಿಕ್ಷಣ

ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಂತಹ ಅಧಿಕಾರಿಗಳ ನಿರ್ಲಕ್ಷ್ಯತನ ಎಷ್ಟೊಂದು ತೋರಿಸುತ್ತದೆ ಎಂದರೆ ಕೊಳ್ಳೇಗಾಲ ತಾಲ್ಲೂಕಿನ ಆಲೂರು, ಚಿಲಕವಾಡಿ, ಯಳಂದೂರು ತಾಲ್ಲೂಕಿನ ಸಂತೇಮರಳ್ಳಿ ಬಹುಶಃ ಇವನ್ನು ನಾವು ನೆನಸಿಕೊಳ್ಳುವ ಹಾಗೆ ಇಲ್ಲ ನನ್ನ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಆಲೂರು ಬರುವುದಿಲ್ಲ ಯಳಂದೂರು ತಾಲ್ಲೂಕಿನಲ್ಲಿ ಸಂತೇಮರಳ್ಳಿಯು ಸಹ ಬರುವುದಿಲ್ಲ ಬಹುಶಃ ಈ ಉತ್ತರಗಳನ್ನು ತಯಾರು ಮಾಡಿಕೊಡುವಾಗ ದಯವಿಟ್ಟು ನಾನು ಬಹಳ ನೋವಿನಿಂದ ಹೇಳುತ್ತೇನೆ ಶಿಕ್ಷಣ ಇಲಾಖೆಯಲ್ಲಿ ಎಷ್ಟು ಬೇಜವಾಬ್ದಾರಿಯಿಂದ ಉತ್ತರವನ್ನು ಕೊಡುತ್ತಾರೆ, ಅದು ಬಹಳ ದೊಡ್ಡ ದುರಂತ ಸಂತೇಮರಳ್ಳಿ ಅದು ಚಾಮರಾಜನಗರ ತಾಲ್ಲೂಕಿಗೆ ಬರುತ್ತದೆ ಆಲೂರು ಮತ್ತು ಸಂತೇಮರಳ್ಳಿ, ನನ್ನ ಕ್ಷೇತ್ರದೊಳಗಡೆ ಅಂದರೆ ನಾನು ಕೊಳ್ಳೇಗಾಲದ ಬಗ್ಗೆ ಕೇಳಿದ್ದೇನೆ ಆದರೆ ಇಡೀ ತಾಲ್ಲೂಕಿನಲ್ಲಿ ಎಂದು ಹಾಕಿಬಿಟ್ಟು ಇನ್ನೊಂದು ಕ್ಷೇತ್ರದ ಅಂಕಿ ಅಂಶವನ್ನು ಕೂಡ ಇದರಲ್ಲಿ ಸೇರಿಸಿದ್ದಾರೆ ಈ ಬಗ್ಗೆ ನನಗನಿಸುತ್ತದೆ ನಮ್ಮ ಕೊಳ್ಳೇಗಾಲ ಪಟ್ಟಣದಂತಹ ವ್ಯಾಪ್ತಿಯೊಳಗಡೆ ಸುಮಾರು 63 ಸಾವಿರ ಪಾಪ್ಯುಲೇಷನ್ ಇದೆ ಅಲ್ಲಿ ಪಿ ಯು ಓದುತ್ತಿರುವಂತಹ ಮಕ್ಕಳು ಸುಮಾರು 2500 ರಿಂದ 3500 ಮಕ್ಕಳು ಅಲ್ಲಿ ಎರಡು ಕಾಲೇಜಿನಲ್ಲಿ ಓದುತ್ತಿದ್ದಾರೆ ಅದು ಬಹಳ ಕಷ್ಟಸಾಧ್ಯವಾದ ಪರಿಸ್ಥಿತಿಯಲ್ಲಿದೆ ಅದಕ್ಕಾಗಿ ಗ್ರಾಮೀಣ ಪ್ರದೇಶದ ಮಕ್ಕಳನ್ನು ಟೌನ್‌ಗೆ ಬರದಹಾಗೆ ಮಾಡಬೇಕಾದರೆ ಆ ಪ್ರದೇಶದ ವ್ಯಾಪ್ತಿಗೆ 2 ಕಾಲೇಜುಗಳನ್ನು ಕೊಡಿ ಎಂದು ನಾನು ಕಳೆದ ಸಾರಿ ಮನವಿಯನ್ನು ಮಾಡಿದ್ದೇನೆ ಯಾವುದೋ ಕಾರಣದಿಂದ ಕಳೆದ ಸಾರಿ ನಮಗೆ ಕೊಟ್ಟಿರುವುದಿಲ್ಲ ಅದಕ್ಕಾಗಿ ಆ ಸಾಲಿನಲ್ಲಿ ಕೊಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ ಮಾನ್ಯ ಸಚಿವರು ಈ ಬಗ್ಗೆ ಸಮರ್ಪಕವಾದ ಉತ್ತರವನ್ನು ಹೇಳಬೇಕು

ಶ್ರೀ ಬಸವರಾಜ್ ಎಸ್ ಹೊರಟ್ಟಿ – ಶಾಸಕರ ಕ್ಷೇತ್ರದಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಹೇಳಿದರು ಇಲ್ಲೇನಾಗಿದೆ, ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಎಂದು ನಾವು ಪರಿಗಣನೆಗೆ ತೆಗೆದುಕೊಂಡಿದ್ದೇವೆ, ಒಟ್ಟು ಕ್ಷೇತ್ರವಾರು ತಾವು ಹೇಳಿದಿರಿ, ಸರಿ ಅದಕ್ಕೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟರೆ ಅವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಮಾನ್ಯ ಶಾಸಕರು ಹೇಳಿದಂತೆ ಈಗೇನು ನಂಜುಂಡಪ್ಪ

ವರದಿಯ ಪ್ರಕಾರ ಅನೇಕ ಕಡೆಗೆ ಇವೆಲ್ಲಾ ಹೆಚ್ಚು ಕಡಿಮೆಯಾಗಿವೆ ಎಲ್ಲಿ ಕಾಲೇಜುಗಳನ್ನು ಕೊಡಬೇಕು ಅಲ್ಲಿ ಕೊಟ್ಟಿಲ್ಲ, ಎಲ್ಲಿ ಕೊಟ್ಟಿದೆ ಇಂತಹ ತಾರತಮ್ಯಗಳೆಲ್ಲಾ ಆಗಿವೆ, ಈ ಸಾರಿ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಜನಸಂಖ್ಯೆ ಇದೆ, ಈಗಾಗಲೇ ಸರ್ಕಾರಿ ಜೂನಿಯರ್ ಕಾಲೇಜುಗಳು ಎಷ್ಟಿವೆ, ಮುಂದು ಕೊಡುವಂಥ ಅವಶ್ಯಕತೆ ಏನಿತ್ತು ಎಲ್ಲಾ ಮಾಹಿತಿಯನ್ನು ತರಿಸಿದ್ದೇನೆ, ತರಿಸಿ ಅದನ್ನು ಸರಿಪಡಿಸಿ ಬರುವಂಥ ದಿನಮಾನಗಳಲ್ಲಿ ಅವರಿಗೆ ಏನು ಅನ್ಯಾಯವಾಗಿದೆ, ಅದನ್ನು ಸರಿಪಡಿಸುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಹೇಳಲಿಚ್ಚಿಸುತ್ತೇನೆ

ಶ್ರೀ ಎಸ್ ಬಾಲರಾಜ್ – ನನಗೇನೆಂದರೆ, ಇಡೀ ಯಳಂದೂರು ತಾಲ್ಲೂಕಿಗೆ ಒಂದೇ ಸರ್ಕಾರಿ ಕಾಲೇಜು, ತಾಲ್ಲೂಕು 24 ಕಿ ಮೀ ನಿಂದ ಆ ಪಿ ಯು ಗೆ ಬರುವ ಮಕ್ಕಳು ಆ ಯಳಂದೂರು ಪಟ್ಟಣಕ್ಕೆ ಬರಬೇಕು ನಮಗೆ ಖಾಸಗಿ ಕಾಲೇಜುಗಳಿಗೆ ನಮ್ಮಲ್ಲಿರುವವರು ದುಡ್ಡು ಕೊಟ್ಟು ಬಹುತೇಕ ಅಲ್ಪಸಂಖ್ಯಾತರು, ಬಡವರು ಮತ್ತು ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಜನಾಂಗದವರು ಸುಮಾರು 75% – 80%, ಅವರೆಲ್ಲಾ ಫೀಸ್ ಕಟ್ಟಿ ಹೊರಗಡೆ ಓದಲಿಕ್ಕಾಗುವುದಿಲ್ಲ ಆದ್ದರಿಂದ ಸರ್ಕಾರಿ ಕಾಲೇಜುಗಳನ್ನು ಆಯಾ ಭಾಗಗಳಲ್ಲಿ ಕನಿಷ್ಠ ಪಕ್ಷ ಮಾಡಿದರೆ ಅನುಕೂಲವಾಗುತ್ತದೆ, ದಯವಿಟ್ಟು ನಂಜುಂಡಪ್ಪ ವರದಿಯ ಪ್ರಕಾರವೂ ನಮ್ಮದು ಹಿಂದುಳಿದಂಥ ಪ್ರದೇಶವಾಗಿರುವುದರಿಂದ ನಮಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ಹಾಗೂ ನಮ್ಮಲ್ಲಿ ಅತೀ ಹೆಚ್ಚು ಬಡವರಿರುವುದರಿಂದ ಕಡ್ಡಾಯವಾಗಿ ಮಾಡಿಕೊಡಲೇಬೇಕು ಅದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ನನ್ನ ಪ್ರಾರ್ಥನೆ

ಶ್ರೀ ಬಸವರಾಜ್ ಎಸ್ ಹೊರಟ್ಟಿ – ಪ್ರಸ್ತುತ ಜಾಗದಲ್ಲಿ ಶಾಲೆಯನ್ನು ಮಂಜೂರು ಮಾಡಲಾಗುವುದೆಂದು ಹೇಳಿದ್ದಾರೆ, ಅವಶ್ಯಕತೆಗೆ ಅನುಗುಣವಾಗಿ ಮಂಜೂರು ಮಾಡಲಾಗುತ್ತದೆ

ಶ್ರೀ ಆರ್ ಧ್ರುವನಾರಾಯಣ್ –200 ಪದವಿಪೂರ್ವ ಕಾಲೇಜುಗಳನ್ನು ಸರ್ಕಾರ ಮಂಜೂರು ಮಾಡಿತು ಅವರು ಮಾಡಬೇಕಾದರೆ ಯಾವಾಗಲೂ ಡಾ॥ ನಂಜುಂಡಪ್ಪನವರ ವರದಿ ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರೆ ಕಳೆದ

ಸಾರಿ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಅವರು ಮಾಡಲಿಲ್ಲ, ಅದು ಪಿ ಯು ಸಿ ಕಾಲೇಜಾಗಲಿ, ಹೈಸ್ಕೂಲ್ ಆಗಲಿ, ಈ ಬಾರಿ ಡಾ॥ ನಂಜುಂಡಪ್ಪನವರ ವರದಿಯಾಧಾರದ ಮೇಲೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಪ್ರೌಢಶಾಲಾ ಮತ್ತು ಪಿ ಯು ಕಾಲೇಜುಗಳನ್ನು ಮಂಜೂರು ಮಾಡಿಕೊಡಬೇಕಾಗಿ ಸಚಿವರಲ್ಲಿ ವಿನಂತಿಸುತ್ತೇನೆ ಏಕೆಂದರೆ ಕಳೆದ ಬಾರಿ ಬಹಳಷ್ಟು ಲೋಪವಾಗಿ, ತಾವೇ ಒಪ್ಪಿಕೊಂಡಿದ್ದೀರಿ, ಒಂದೇ ಹಾಸನ ಜಿಲ್ಲೆಯಲ್ಲಿ ಒಂದೇ ಕ್ಷೇತ್ರಕ್ಕೆ 7 ಪಿ ಯು ಕಾಲೇಜುಗಳು, 8 ಹೈಸ್ಕೂಲ್‌ಗಳು, ರಾಮನಗರಕ್ಕೆ 7 ಹೈಸ್ಕೂಲ್ಸ್, 8 ಪಿ ಯು ಕಾಲೇಜುಗಳು, ಈ ರೀತಿ ಬಹಳಷ್ಟು ಕೊಟ್ಟಿದ್ದಾರೆ

ಉಪಾಧ್ಯಕ್ಷರು – ನಿಮಗೇನು ಬೇಕೆಂಬುದನ್ನು ನೇರವಾಗಿ ಕೇಳಿಬಿಡಿ, ಹಿಂದಕ್ಕೆ ಏತಕ್ಕೆ ಹೋಗುತ್ತೀರಿ

ಶ್ರೀ ಆರ್ ಧ್ರುವನಾರಾಯಣ್ – ಆದ್ದರಿಂದ ಈ ವರ್ಷ ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ಪ್ರದೇಶಗಳನ್ನು ಪರಿಗಣಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ

ಉಪಾಧ್ಯಕ್ಷರು – ಈಗ ಅವರು ಇನ್ನೂ ಬಾಲರಾಜ್‌ರವರ ಪ್ರಶ್ನೆಗೆ ಉತ್ತರ ಕೊಡಬೇಕಲ್ಲವೇ, ಹೇಳಬೇಕಲ್ಲ, ಈಗ ಆಯಿತು ಇಲ್ಲ ಅವರೇನು ಹೇಳುತ್ತಾರೆ ಕೇಳೋಣ

ಶ್ರೀ ಆರ್ ಧ್ರುವನಾರಾಯಣ್ –ಅವರು ಹೇಳುವುದೇ ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಮಾಡುತ್ತೇವೆಂದು

ಶ್ರೀ ಬಸವರಾಜ್ ಎಸ್ ಹೊರಟ್ಟಿ – ಖಂಡಿತವಾಗಿ ಈ ಸಾರಿ ನಂಜುಂಡಪ್ಪನವರ ವರದಿಯ ಪ್ರಕಾರ ಎಲ್ಲೆಲ್ಲಿ ಹಿಂದುಳಿದಂಥ ಮಕ್ಕಳು ಏನಿದ್ದಾರೆ, ಸರ್ಕಾರ ಜೂನಿಯರ್ ಕಾಲೇಜುಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಅಲ್ಲಿಗೆ first priority ಅನ್ನು ಕೊಡುವುದಾಗಿ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಹೋದ ಸಾರಿ ಕೆಲವು ಲೋಪದೋಷಗಳಾಗಿವೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ನಾವು ಮಾಡುವಾಗ ಕೆಲವು ಹೆಚ್ಚುಕಡಿಮೆಯಾಗಿದೆ, ಅದರಲ್ಲೇನು ಬೇರೆ ಮಾತಿಲ್ಲ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ – ನೀವು ರಿಮೋಟ್ ಕಂಟ್ರೋಲ್‌ನಿಂದ ಹೊರಗೆ ಬಂದರೆ ನೀವು ಸರಿಹೋಗುತ್ತದೆ

(ಗೊಂದಲ)

ಉಪಾಧ್ಯಕ್ಷರು – ಆಯಿತು, ಅವರು ಹೇಳುತ್ತಿದ್ದಾರಲ್ಲಾ, ಒಂದು ನಿಮಿಷ ಸುಮ್ಮನಿರಿ

ಶ್ರೀ ಬಸವರಾಜ್ ಎಸ್ ಹೊರಟ್ಟಿ – ಅಧ್ಯಕ್ಷರೇ, ಈ ಸಾರಿ ಕಡ್ಡಾಯವಾಗಿ ನಂಜುಂಡಪ್ಪ ವರದಿಯ ಪ್ರಕಾರ ಮೊದಲು ಎಲ್ಲಾ ತಾಲ್ಲೂಕುಗಳಿಗೆ ಆದ್ಯತೆಯನ್ನು ಕೊಟ್ಟ ನಂತರ ಉಳಿದ ತಾಲ್ಲೂಕುಗಳಿಗೆ ಪರಿಗಣಿಸಲಾಗುವುದು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ನಂಜುಂಡಪ್ಪ ವರದಿಯ ಪ್ರಕಾರ ಎಲ್ಲಾ ತಾಲ್ಲೂಕುಗಳಿಗೆ ಕೊಡುತ್ತೇನೆಂದು ಹೇಳುತ್ತಿದ್ದೇನೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ಈಗ ಪಟ್ಟಿಯನ್ನು ನೀವೇ ಫೈನಲ್ ಮಾಡುತ್ತೀರಾ ಎಂದು ಹೇಳಬೇಕು

ಉಪಾಧ್ಯಕ್ಷರು – ಸುನಿಲ್ ಕುಮಾರ್, ಇಲ್ಲವೇ, ಡಾ॥ ಸಿರಿಯಣ್ಣನವರ್

ಶಿಕ್ಷಕರ ಅಮಾನತ್ತು

298 (2119) ಡಾ॥ ಸಿರಿಯಣ್ಣನವರ್ ಆರ್ ಬಿ, (ನವಲಗುಂದ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಲಗುಂದ ತಾಲ್ಲೂಕಿನ ಶಿರ್ಲಾಪೂರ ಗ್ರಾಮದಲ್ಲಿ ದಿ 4–2–2007 ರಂದು ಶಾಲಾ ಕೊರಡಿಗಳ ಭೂಮಿ ಪೂಜೆ ಸಮಾರಂಭವನ್ನು ಪಂಚಾಯತ್ ಸಮಿತಿಯವರು ಅಲ್ಲಿನ ಶಾಸಕರ ಸಮ್ಮುಖದಲ್ಲಿ ಜರುಗಿಸಿದ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ